


ಹಾಗೂ ಬದುಕನ್ನು ಕಾವ್ಯ ಹಾಗೂ ಹಸುರು ಆವರಿಸಿಕೊಳ್ಳಬೇಕು ಎನ್ನುವ ಹಂಬಲವೂ ಪದ್ಯದಲ್ಲಿದೆ.

'ಹೀಗಾಯಿತು' ಕವಿತೆ, 'ತಾರೆಗಳೆಲ್ಲ ಪಟಪಟ ಉದುರಲು ಮಣ್ಣಲಿ ಮೊಳೆತವು ಗಿಡವಾಗಿ' ಎನ್ನುತ್ತದೆ. 'ಜ್ವರ' ಕವಿತೆಯಲ್ಲಿ ಎಲೆ-ಮರಗಳ ಗಾತ್ರ ಸ್ವರೂಪವನ್ನು ಚಿತ್ರಿಸುತ್ತ, ಎಲ್ಲ ತರಹದ ಮರಗಳು ಇರುವುದನ್ನು ಸೂಚಿಸುತ್ತ, 'ಮರ ಇಲ್ಲದಿದ್ರೆ ಮಾತ್ರ, ಭೂಮಿಗೆಲ್ಲ ಜ್ವರ' ಎನ್ನುವ ದೊಡ್ಡ ಸತ್ಯವನ್ನು ಸರಳವಾಗಿ ಹೇಳುವುದು ಅರ್ಥಪೂರ್ಣವಾಗಿದೆ.

ಪದ್ಯಗಳ ನಡುವೆ ನವಿಲುಗರಿಗಳಂತೆ ಸಿಗುವ ಅರ್ಥಪೂರ್ಣವಾದ, ಸುಂದರವಾದ ಹಾಗೂ ಭಾಷೆಯ ಬಗ್ಗೆ ಪ್ರೀತಿ ಮೂಡಿಸಬಲ್ಲ ಸಾಲುಗಳು ಹೃದ್ಯವೆನ್ನಿಸುತ್ತವೆ. ಕಲ್ಪನೆಯ ಸೊಗಸು ಆಹ್ಲಾದಕರವಾಗಿದೆ. 'ಗಾಳಿಯು ನಮ್ಮ ಬೀಜದ ಬುಟ್ಟಿ', 'ಜೇನುಗಳೆಲ್ಲಾ ರೈತನ ಹಾಡು' - ಇಂಥ ಸಾಲುಗಳು ಮೊಸರಿನಲ್ಲಿ ಸಕ್ಕರೆ ಸಿಕ್ಕಂತಿವೆ. 'ಮರಗಳೆಲ್ಲ ಹಾರುತ್ತಿದ್ದರೆ ಹಕ್ಕಿ ಹೇಗಿರಬಹುದು? ಮರಗಳ ಸಂಗಡ ಹಾರುತ ಹಾರುತ ಮರವೇ ಆಗಲುಬಹುದು' ಎನ್ನುವ ಸುಂದರ ಕಲ್ಪನೆಯ ಜೊತೆಯಲ್ಲೇ, 'ಅಯ್ಯೋ ಅಲ್ಲಿ ಉರಿಯುವ ಸೂರ್ಯನಿಗೆ ಹಾಕಿರಿ ತಂಪನೆ ಎಣ್ಣೆ' ಎನ್ನುವ ಆಕರ್ಷಕ ಸಾಲೂ ಇದೆ. 'ಮಗುವಾಗಿ ಬಿಟ್ಟ' ರಚನೆಯಲ್ಲಿ ಫೋಟೊದೊಳಗಿನ ಗಾಂಧಿ ಮಹಾತ್ಮ ಜೀವಗೊಂಡು ಪುಟ್ಟನ ಜೊತೆ ಊರು ಸುತ್ತುತ್ತಾನೆ. ಮಕ್ಕಳ ನಡುವೆ ಆಡುತ್ತಾ ಆಡುತ್ತಾ ತಾತನೂ ಮಗುವಾಗಿಬಿಡುತ್ತಾನೆ.

ತಮ್ಮಣ್ಣ ಬೀಗಾರರ 'ಹಸಿರಿನ ಕಟ್ಟು' ಸಂಕಲನದ ಪದ್ಯಗಳು ಎಳೆಯರು ಮಾತ್ರವಲ್ಲ, ದೊಡ್ಡವರೂ ಓದಿ ಖುಷಿಪಡಬಹುದು; ಮಕ್ಕಳೊಂದಿಗೆ ಹಂಚಿಕೊಂಡು ಗುನುಗಿಕೊಂಡು ಸಂಭ್ರಮಿಸಬಹುದು. ಬೀಗಾರರು ಮೇಷ್ಟರಾಗಿದ್ದವರು. ಮೇಷ್ಟ್ರು ಕವಿಯಾದಾಗ, ಪದ್ಯಗೊಳಗೂ ಮೇಷ್ಟ್ರುತನ ನುಸುಳುವುದು ಅಚ್ಚರಿಯೇನಲ್ಲ. ಆದರೆ, ತಮ್ಮಣ್ಣರ ಪದ್ಯಗಳಲ್ಲಿ ಮಕ್ಕಳಿಗೆ ನೀತಿಬೋಧನೆಯನ್ನು ಹುಕಿ ಎದ್ದುಕಾಣಿಸುವುದಿಲ್ಲ. ಇಲ್ಲಿನ ಪದ್ಯಗಳಲ್ಲಿಯೂ ನೀತಿಯಿದೆ. ಮಕ್ಕಳನ್ನು ರಂಜಿಸುತ್ತಲೇ, ಕಥನದಲ್ಲಿ ಮೈಮರೆಸುತ್ತಲೇ, ಕಾಳಜಿಯನ್ನು ದಾಟಿಸಬಲ್ಲ ಅಪ್ಪಟ ಮೇಷ್ಟ್ರುತನ ಇಲ್ಲಿಯದು.

ಈ ಸೊಗಸಾದ ಪದ್ಯಗಳ ಹೊಳಪನ್ನು ಸಂತೋಷ್ ಸಸಿಹಿತ್ಲು ಅವರ ಚಿತ್ರಗಳ ಜುಗಲಬಂದಿ ಮತ್ತಷ್ಟು ಹೆಚ್ಚಿಸಿದೆ. ಕವಿಯ ಹೆಸರಿನ ಜೊತೆಗೆ ಕಲೆಗಾರನ ಹೆಸರಿಗೂ ಮುಖಪುಟದಲ್ಲಿ ಅವಕಾಶ ದೊರೆತಿರುವುದು ವಿಶೇಷ. ಅಚ್ಚುಕಟ್ಟಾಗಿ ರೂಪುಗೊಂಡಿರುವ ಈ ಕೃತಿಯಲ್ಲಿ ಸಣ್ಣ ಕೊರೆಯೊಂದಿದೆ. ಅದು, ವಿನ್ಯಾಸಕ್ಕೆ ಸಂಬಂಧಿಸಿದ್ದು. ಅನೇಕ ಪದ್ಯಗಳಲ್ಲಿ ಸ್ಪ್ಯಾಂಜಾಗಳು ಕೂಡಿಕೊಂಡಿವೆ. ಇದರಿಂದಾಗಿ ಓದಿನ ಓಘಕ್ಕೆ ತೊಡಕುಂಟಾಗುತ್ತದೆ. ಈ ದೋಷವನ್ನು ವಿನ್ಯಾಸಕಾರರು, ಪ್ರಕಾಶಕರು, ಕವಿ ಗಮನಿಸಬೇಕಾಗಿತ್ತು.

**ಲೇ: ತಮ್ಮಣ್ಣ ಬೀಗಾರ; ಪು: 66; ಬೆ: ₹ 75; ಪ್ರ: ಅಭಿನವ, ಬೆಂಗಳೂರು. ಫೋನ್: 9448804905**